<u>ಸ್ಪೆಷಲ್ ಕೇಸ್ ನಂ. 362/2018</u>

<u>ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 03.08.2023</u>

<u>ಪಾಟೀ ಸವಾಲುಃ ಆರೋಪಿತರ ಪರ  ವಕೀಲರಿಂದಃ</u>

1. ನಾನು 2001-02 ರಲ್ಲಿ ತಾಲ್ಲೂಕು ಪಂಚಾಯಿತಿಯಲ್ಲಿ ಸದಸ್ಯಳಾಗಿ ಕೆಲಸ ಮಾಡಿದ್ದೇನೆಂದರೆ ಸರಿ, ಹೀಗಾಗಿ ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಯ ವ್ಯವಹಾರಗಳಲ್ಲಿ ಅನುಭವ ಇದೆ ಎಂದರೆ ಸರಿ. ಸದರಿ ಸಾಲಿನಲ್ಲಿ ನನಗೆ ವಾಸದ ಮನೆ ಪಂಚಾಯಿತಿಯಿಂದ ಮಂಜೂರು ಆಗಿತ್ತು ಎಂದರೆ ಸರಿ. ಅದೇ ಮನೆಯಲ್ಲಿ ನಾನು, ನನ್ನ ಗಂಡ ಮಕ್ಕಳು ವಾಸ ಮಾಡುತ್ತಿದ್ದೆವು. ಸದರಿ ಸಾಲಿನಲ್ಲಿ ನಮ್ಮ ಮನೆಯ ಮುಂಭಾಗ ಶಂಕರಯ್ಯ ರವರಿಗೆ ಪಂಚಾಯಿತಿವತಿಯಿಂದ ಮನೆ ಮಂಜೂರು ಆಗಿತ್ತು ಎಂದರೆ ಸರಿ. ನಂತರ ಅಲ್ಲಿ ಶಂಕರಯ್ಯ ಅರ್ಧದವರೆಗೆ ಮನೆ ನಿರ್ಮಾಣ ಮಾಡಿದ್ದ. ಈ ಸಂಬಂಧ ಸರ್ಕಾರದಿಂದ ಹಣ ಬಿಡುಗಡೆ ಆಗಿತ್ತು. ಈ ಸಂದರ್ಭದಲ್ಲಿ ಶಂಕರಯ ಪಕ್ಕದ ಚಾಮನಹಳ್ಳಿಯಲ್ಲಿ ವಾಸ ಇದ್ದರಿಂದ ಹಣ ಬಿಡುಗಡೆ ಆದದ್ದನ್ನು ಸರ್ಕಾರದವರು ವಾಪಸ್ ಪಡೆದುಕೊಂಡಿದ್ದರು. ಪಕ್ಕದ ಹಳ್ಳಿಗೆ ಹೋಗಿ ಸೇರಿಕೊಂಡಿದ್ದರಿಂದ ಆ ಮನೆ ಅರ್ಧಕ್ಕೆ ಉಳಿದಿತ್ತು ಎಂದರೆ ಸರಿ. ಪಕ್ಕದ ಊರಿಗೆ ಸೇರಿಕೊಂಡಿದ್ದರಿಂದ ಹಿಂದೆ ಆ ಸ್ವತ್ತನ್ನು ಪಂಚಾಯಿತಿಯವರು ವಶಕ್ಕೆ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಅರ್ಧಕ್ಕೆ ಬಿಟ್ಟಿದ್ದ ಮನೆಯನ್ನು ಪಂಚಾಯಿತಿಗೆ ನಾನಾಗಲೀ, ಚಾಸಾ.1 ರವರು ಪಂಚಾಯಿತಿಯವರಿಗೆ ಅದನ್ನು ನಮಗೆ ಮಂಜೂರು ಮಾಡಿಕೊಡಿ ಎಂದು ಅರ್ಜಿ ಕೊಟಿರಲಿಲ್ಲ ಎಂದರೆ ಸರಿಯಲ್ಲ. ನಾವು ಅರ್ಜಿ ಕೊಟ್ಟ ನಂತರ ಪಂಚಾಯಿತಿಯವರು ಇನ್ನೂ ನಮಗೆ ಮಂಜೂರು ಮಾಡಿಕೊಟ್ಟಿರಲಿಲ್ಲ ಎಂದರೆ ಸರಿ. ಆಗಲೇ ಒಂದು ಮನೆ ಇದ್ದು ಮತ್ತೊಂದು ಮನೆಯನ್ನು ಪಂಚಾಯಿತಿಯವರು ಕೊಡಲು ಆಗುವುದಿಲ್ಲ ಎಂದು ನಮಗೆ ಮಂಜೂರು ಮಾಡಿರಲಿಲ್ಲ ಎಂದರೆ ಸರಿ.

2. ಆಸ್ತಿ ಸಂಖ್ಯೆ 1025 ನನಗಾಗಲೀ ನನ್ನ ಕುಟುಂಬದವರ ಹೆಸರಿನಲ್ಲಿ ಮಾಲೀಕತ್ವ ಇರುವುದಿಲ್ಲ. ಶಂಕರಯ್ಯ ಹೋದ ಮೇಲೆ ಅಲ್ಲಿ ನಾವು ದನ ಕರುಗಳು, ಆಟೋ ಇವುಗಳನ್ನು ನಿಲ್ಲಿಸುತ್ತೇವೆಂದರೆ ಸರಿಯಲ್ಲ. ಪಂಚಾಯಿತಿಯವರು ಆಸ್ತಿಯನ್ನು ಸವಿತಾ ಸಮಾಜದವರಿಗೆ ಕೊಡಬೇಕು ಎಂದು ಪಂಚಾಯಿತಿಯಲ್ಲಿ ತೀರ್ಮಾನ ಆಗಿತ್ತು ಎಂದರೆ ಸರಿಯಲ್ಲ. ಈ ರೀತಿ ತೀರ್ಮಾನ ಆದ ಮೇಲೆ ಸ್ಥಳಕ್ಕೆ ಪಂಚಾಯಿತಿಯವರು, ಪೊಲೀಸರು ಬಂದಿದ್ದರು ಎಂದರೆ ಹೊಡೆದಾಟ ಆದ ಮೇಲೆ ಬಂದಿದ್ದರು. ಆ ಸ್ವತ್ತು ನನಗಾಗಲೀ, ಚಾಸಾ.1 ರವರ ಹೆಸರಿನಲ್ಲಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರಲಿಲ್ಲ ಎಂದರೆ ಸರಿ. ಅದೇ ರೀತಿ ಪಂಚಾಯಿತಿಯವರು ಸ್ವತ್ತು ಪಂಚಾಯಿತಿಗೆ ಸೇರಿದ್ದು ಅದನ್ನು ಖಾಲಿ ಮಾಡಿಕೊಡಿ ಎಂದು ನೋಟಿಸು ಕೊಟ್ಟಿದ್ದರು ಎಂದರೆ ಸರಿಯಲ್ಲ. ನೋಟಿಸನ್ನು ನಾವು ಹಾಗೂ ನಮ್ಮ ಮನೆಯವರು ತಿರಸ್ಕರಿಸಿರುತ್ತೇವೆ ಎಂದರೆ ಸರಿಯಲ್ಲ. ಸ್ವತ್ತು ನಮಗೆ ಸೇರಿದೆ ಎಂದು ಪಂಚಾಯಿತಿ ಅಧಿಕಾರಿಗಳು ಸ್ಥಳಕ್ಕೆ ಬಂದಾಗ ನಾವು ಪ್ರತಿರೋಧ ಒಡ್ಡಿದ್ದೆವು ಎಂದರೆ ಸರಿಯಲ್ಲ.

3. ಈ ವಿಚಾರದಲ್ಲಿ ಆರೋಪಿ ನಾರಾಯಣ ನನ್ನ ವಿರುದ್ಧ ಸದರಿ ಆಸ್ತಿ ಅವರಿಗೆ ಸೇರಬೇಕೆಂದು ಓ ಎಸ್ 86/2002 ನ್ನು ಹಾಕಿದ್ದರು ಎಂದರೆ ಸರಿ. ಆ ಕೇಸಿನಲ್ಲಿ ನಾನು ವಕೀಲರನ್ನು ನೇಮಕ ಮಾಡಿಕೊಂಡಿದ್ದು, ದಾವೆ ತೀರ್ಮಾನವಾಗಿ ಸದರಿ ಆಸ್ತಿ ಪಂಚಾಯಿತಿಗೆ ಸೇರಿದ್ದು ಎಂದು ತೀರ್ಮಾನ ಆಗಿರುತ್ತದೆ ಎಂದರೆ ಸರಿಯಲ್ಲ. ಶಂಕರಯ್ಯ ರವರು ಆಸ್ತಿಯನ್ನು ಖಾಲಿ ಮಾಡಿದ ನಂತರ ಅದನ್ನು ಪಂಚಾಯಿತಿಯವರು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಆ ಕೇಸಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದೇನೆಂದರೆ ಸರಿಯಲ್ಲ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ ನಮ್ಮ ಕುಟುಂಬ ಹಾಗೂ ಆರೋಪಿತರ ನಡುವೆ ವ್ಯಾಜ್ಯ ಇದೆ ಎಂದರೆ ಸರಿ. ಸದರಿ ಜಾಗವನ್ನು ತೆರವುಗೊಳಿಸಲು ನನಗೆ ಪಂಚಾಯಿತಿಯಿಂದ ಹಲವಾರು ಬಾರಿ ಕೇಳಿ ನೋಟಿಸು ಕೊಟ್ಟಿದ್ದು ಅದನ್ನು ನಮ್ಮ ಕುಟುಂಬದವರು ತಿರಸ್ಕರಿಸುತ್ತೇವೆ ಎಂದರೆ ಸರಿಯಲ್ಲ. ನೋಟಿಸನ್ನು ನಾನು ತಿರಸ್ಕರಿಸಿದ್ದರಿಂದ

ಆಸ್ತಿಯಲ್ಲಿ ನೋಟಿಸು ಅಂಟಿಸಿದ್ದರು ಎಂದರೆ ಸರಿಯಲ್ಲ. ಆಸ್ತಿಯನ್ನು ಸವಿತಾ ಸಮಾಜದವರಿಗೆ ಕೊಡುತ್ತಿದ್ದಾರೆಂದು ಗೊತ್ತಾದ ನಂತರ ಆಸ್ತಿಯನ್ನು ಅವರಿಗೆ ಕೊಡಬೇಡಿ ಎಂದು ನಾವು ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ಪಂಚಾಯಿತಿಯವರು ಮಾಡಿರುವ ತೀರ್ಮಾನವನ್ನು ಹೇಗಾದರೂ ಮಾಡಿ ತಡೆಯುವ ಸಂಬಂಧ ಹಾಗೂ ಅಸ್ತಿಯನ್ನು ಉಳಿಸಿಕೊಳ್ಳುವ ಸಲುವಾಗಿ ನನ್ನ ಮಗನ ಮುಖಾಂತರ ಸುಳ್ಳು ದೂರನ್ನು ಕೊಟ್ಟಿರುತ್ತೇವೆಂದರೆ ಸರಿಯಲ್ಲ.

4. ಮನೆಯನ್ನು ಖಾಲಿ ಮಾಡಿಸುವ ಸಲುವಾಗಿ ಪಂಚಾಯಿತಿಯವರು ಮನೆ ಹತ್ತಿರ ಬರುತ್ತಾರೆಂಬ ವಿಷಯ ನನಗೆ ತಿಳಿದಿತ್ತು ಎಂದರೆ ಸರಿ. ಈ ಸಂಬಂಧ ಅಧಿಕಾರಿಗಳು ನಮ್ಮ ಮನೆಗೆ ಬಂದಾಗ ಪೊಲೀಸರು ಬಂದಿದ್ದರು ಎಂದರೆ ಹೊಡೆದಾಟ ಆದಾಗ ಪೊಲೀಸರು ಬಂದಿದ್ದರು. ಆಗ ಪಂಚಾಯಿತಿಯವರು ಹಾಗೂ ಗ್ರಾಮಸ್ಥರು ಸ್ಥಳದಲ್ಲಿ ಸೇರಿದ್ದರು ಎಂದರೆ ಸರಿ. ಆಗ ನಮ್ಮ ಕುಟುಂಬದವರು ಆಸ್ತಿ ನಮಗೆ ಸೇರಿದ್ದು ಎಂದು ಯಾವುದೆ ದಾಖಲೆ ಕೊಟ್ಟಿರಲಿಲ್ಲ ಎಂದರೆ ಸರಿ. ನಮಗೆ ಇನ್ನೂ ದಾಖಲೆ ಬಂದಿಲ್ಲ. ಅಧಿಕಾರಿಗಳು ಸ್ಥಳಕ್ಕೆ ಬಂದಾಗ ಆಸ್ತಿ ನಮಗೆ ಸೇರಿದ್ದು ಎಂದು ನಾವು ತಡೆ ಒಡ್ಡಿದ್ದೆವು ಎಂದರೆ ಸರಿ. ಆಗ ಪಂಚಾಯಿತಿ ಅಧಿಕಾರಿಗಳು ನನ್ನ ಹಾಗೂ ಚಾಸಾ.1 ರವರ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸರಿ. ಸದರಿ ದೂರು ದಾಖಲಾದ ನಂತರ ನಮ್ಮ ಮೇಲೆ ಆರೋಪಿತರು ದೂರು ಕೊಟ್ಟಿರುವ ವಿಷಯ ನನಗೆ ಗೊತ್ತು ಎಂದರೆ ಸರಿ. ಮುಂದುವರೆದು ನಾವು ಮೊದಲು ದೂರನ್ನು ಕೊಟ್ಟಿದ್ದೆವು. ಆಸ್ತಿ ನನ್ನದ್ದಲ್ಲ ಪಂಚಾಯಿತಿಗೆ ಸೇರಿದ್ದು ಎಂಬ ವಿಷಯ ತಿಳಿದಿದ್ದರೂ ಕೂಡ ಯಾವುದೇ ಘಟನೆ ನಡೆಯದೇ ಇದ್ದರೂ ಆಸ್ತಿಯನ್ನು ಲಪಟಾಯಿಸಿಕೊಳ್ಳುವ ದೃಷ್ಟಿಯಿಂದ ಚಾಸಾ.1 ರವರ ಮುಖಾಂತರ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ಮುಖ್ಯ ವಿಚಾರಣೆಯ ಕಂಡಿಕೆ 3 ರಲ್ಲಿ "ಸುಮಾರು 5 – 5 ವರೆ ವರ್ಷದ ಹಿಂದೆ ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ನಾನು, ಚಾಸಾ 1 ಹಾಗೂ 2 ಇದ್ದಾಗ ನಮ್ಮ

ಮಗ ಕಟ್ಟಿಂಗ್ ಶೇವಿಂಗ್ ಮಾಡಲು ಕೇಳಿದ್ದಾಗ ಎಲ್ಲಾ ಆರೋಪಿತರು, ರೂಪೇಶ್ ಕುಮಾರ್, ರಮೇಶ, ಉಮೇಶ, ನಾರಾಯಣ, ಮರಿಯಪ್ಪ ಇವರುಗಳು ನಮ್ಮ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿ ಇದು ಪಂಚಾಯಿತಿ ಮನೆ ನೀವು ಇರುವ ಹಾಗಿಲ್ಲ, ನಿಮ್ಮ ಮನೆಯಲ್ಲೇ ಕಟ್ಟಿಂಗ್ ಶೇವಿಂಗ್ ಶಾಪ್ ಮಾಡಿತ್ತೇವೆ ಎಂದು ಚೇರು, ಕನ್ನಡಿ, ಬಾಚಣಿಗೆ, ಬಟ್ಟೆ ಬಿಂದಿಗೆ ಇವುಗಳನ್ನು ತಂದು ನಮ್ಮ ಮನೆಯ ಒಳಗೆ ಇಟ್ಟು" ಎಂದು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. "1 ನೇ ಆರೋಪಿ ನನ್ನ ಗಂಡ ಚಾಸಾ 2 ರವರ ಕತ್ತಿನ ಪಟ್ಟಿ ಹಿಡಿದು ಎಳೆದಾಡಿ ನನ್ನನ್ನು ಮನೆಯಿಂದ ಆಚೆ ಎಳೆದುಕೊಂಡು ಬಂದಾಗ ನನ್ನ ಮಗ ಕೇಳಿದ್ದಕ್ಕೆ 2 ನೇ ಆರೋಪಿ ನನ್ನ ಮಗನನ್ನು ಹಿಡಿದು ಹೊಡೆದು, 3 ನೇ ಆರೋಪಿ ಕೈಗಳಿಂದ ಚಾಸಾ 2 ರವರ ಕಪಾಳಕ್ಕೆ ಹೊಡೆದು, ಚಪ್ಪಲಿ ಕಾಲಿನಿಂದ ಚಸಾ 2 ರವರಿಗೆ ಒದ್ದನು" ಎಂದು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಜ್ಞಾಪಕವಿಲ್ಲ. "ಶೇವಿಂಗ್ ಮಾಡಿ ಎಂದು ಕೇಳಿದ್ದಕ್ಕೆ ಆರೋಪಿತರು ನಮಗೆ ಜಾತಿ ಹಿಡಿದು ನಿಂದನೆ ಮಾಡಿ ಅವಮಾನ ಮಾಡಿದ್ದರು. ಪೋನ್ ಮಾಡಿದ ನಂತರ ಪೊಲೀಸರು ಬಂದಾಗ ಚೇರ್ ಹಾಗೂ ಶೇವಿಂಗ್ ಸಾಮಾನುಗಳನ್ನು ಅಲ್ಲೇ ಬಿಟ್ಟು ಓಡಿ ಹೋದರು. ನಾವು ಹೊಲೆಯ ಮಾದಿಗರಾದ್ದರಿಂದ ಕಟ್ಟಿಂಗ್ ಮಾಡಲು ನಿರಾಕರಿಸಿದ್ದು ಕಟ್ಟಿಂಗ್ ಮಾಡಿ ಎಂದು ನನ್ನ ಮಗ ಕೇಳಿದ್ದರಿಂದ ಆರೋಪಿತರು ಗಲಾಟೆ ಮಾಡಿರುತ್ತಾರೆ" ಎಂದು ಎಂದು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಯಾವುದೇ ವಿಷಯಗಳನ್ನು ಪೊಲೀಸರ ಮುಂದೆ ಹೇಳದೇ ಇದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

6. ಹಲವಾರು ವರ್ಷದಿಂದ ನಾನು ರಾಜಕೀಯದಲ್ಲಿ ಇರುವುದರಿಂದ ಗ್ರಾಮದಲ್ಲಿ ಗುರುತಿಸಿಕೊಂಡಿದ್ದೇನೆಂದರೆ ಸರಿ. ಪ್ರಕರಣ ದಾಖಲಾಗುವ ಹಿಂದಿನ ದಿನಗಳಲ್ಲಿ ಎಲ್ಲಾ ಜನರ ಪಕ್ಷ ಒಂದೇ ಎನ್ನುವ ಹಾಗೇ ಇದ್ದೆವು. ಹಿಂದಿನ ದಿನಗಳಲ್ಲಿ ಯಾವುದೇ ಜಾತಿ ನಿಂದನೆಯ ಪ್ರಕರಣ ದಾಖಲಾಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**7.** ನಮ್ಮ ಗ್ರಾಮದಲ್ಲಿ **6-7** ಸಾವಿರ ಜನಸಂಖ್ಯೆ ಇದ್ದು ನಮ್ಮ ಜನಾಂಗದವರು ಗ್ರಾಮದ ಮಧ್ಯಭಾಗದಲ್ಲಿ ಇದ್ದಾರೆ ಎಂದರೆ ಸರಿ. ನಮ್ಮ ಕುಟುಂಬದವರನ್ನು ಹಾಗೂ ಚಾಸಾ.1 ರವರನ್ನು ಹೊರತುಪಡಿಸಿ ಆರೋಪಿತರ ವಿರುದ್ಧ ಯಾವುದೆ ಜಾತಿ ನಿಂದನೆ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿ. ಘಟನೆಗೆ ಸಂಬಂಧಿಸಿದಂತೆ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ತೆ ಪಡೆದಿರಲಿಲ್ಲ ಎಂದರೆ ಸರಿ. ಈಗಲೂ ಕೂಡ ಸದರಿ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ.

**8.** ಆ ಜಾಗವನ್ನು ಹೇಗಾದರೂ ಮಾಡಿ ಲಪಟಾಯಿಸಿಕೊಂಡು ಅದನ್ನು ಉಳಿಸಿಕೊಳ್ಳುವ ಸಲುವಾಗಿ ಸುಳ್ಳು ದೂರು ಕೊಟ್ಟಿದ್ದೇನೆಂದರೆ ಸರಿಯಲ್ಲ. ಆರೋಪಿತರು ನನಗಾಗಲೀ, ನನ್ನ ಮಗನಿಗೆ ಆಗಲೀ ಹಲ್ಲೆ ಮಾಡಿ, ಅವ್ಯಾಚ ಶಬ್ಧದಿಂದ ಬೈದು ಜಾತಿ ನಿಂದನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ.ಕೆ.)

C/c **5** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.